# ಕೃಷಿ ವಿಶ್ವವಿದ್ಯಾಲಯ, ಧಾರವಾಡ
## ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ

E-mail : bijapuragromet@rediffmail.com Website : http://www.agrometbijapur.org

ದೂರವಾಣಿ: 08352 : 209624 ಫ್ಯಾಕ್ಸ : 08352–230594


## ಗದಗ ಜಿಲ್ಲೆಗಾಗಿ ಹವಾಮಾನ ಆಧಾರಿತ ಕೃಷಿ ಸಲಹೆಗಳು ದಿನಾಂಕ : 08-12-2020

### ಗದಗ ಜಿಲ್ಲೆಯಲ್ಲಿ 02/12/2020 ರಿಂದ 08/12/2020 ರ ಅವಧಿಯಲ್ಲಿಯ ಹವಾಮಾನ ಮಾಹಿತಿ

| | | | |
|---|---|---|---|
| ಮಳೆಯ ಪ್ರಮಾಣ | 4.4 ಮಿ.ಮೀ. | ಬೆಳಗಿನ ಆರ್ದ್ರತೆಯ ಪ್ರಮಾಣ | ಪ್ರತಿಶತ 73 ರಿಂದ 86 |
| ಹಗಲಿನ ಉಷ್ಣಾಂಶ | 27.7$^0$ ಸೆ ದಿಂದ 29.6$^0$ ಸೆ | ಮಧ್ಯಾಹ್ನದ ಆರ್ದ್ರತೆಯ ಪ್ರಮಾಣ | ಪ್ರತಿಶತ 33 ರಿಂದ 64 |
| ರಾತ್ರಿಯ ಉಷ್ಣಾಂಶ | 13.4$^0$ ಸೆ. ದಿಂದ 18.5$^0$ | ಗಾಳಿಯ ವೇಗ | ಪ್ರತಿ ಘಂಟೆಗೆ 0.0 ದಿಂದ 08.0 ಕಿ. ಮೀ. |
| ಮೋಡದ ಪ್ರಮಾಣ | 1 ದಿಂದ 7 ಆಕ್ಟಾ | | |

### ಗದಗ ಜಿಲ್ಲೆಗಾಗಿ ಮುಂದಿನ ಐದು ದಿನಗಳಿಗೆ, ಭಾರತ ಹವಾಮಾನ ವಿಭಾಗವು ನೀಡಿದ ಹವಾಮಾನ ಮುನ್ಸೂಚನೆ

| ಹವಾಮಾನದ ಅಂಶಗಳು | ದಿನಾಂಕ | | | | |
|---|---|---|---|---|---|
| | ಡಿಸೆಂಬರ 09 | ಡಿಸೆಂಬರ 10 | ಡಿಸೆಂಬರ 11 | ಡಿಸೆಂಬರ 12 | ಡಿಸೆಂಬರ 13 |
| ಮಳೆಯ ಪ್ರಮಾಣ (ಮಿ.ಮಿ.) | 0 | 0 | 1 | 0 | 0 |
| ಹಗಲಿನ ಉಷ್ಣಾಂಶ ($^0$ಸೆ) | 29 | 30 | 30 | 30 | 30 |
| ರಾತ್ರಿಯ ಉಷ್ಣಾಂಶ ($^0$ಸೆ)) | 21 | 20 | 20 | 20 | 19 |
| ಬೆಳಗಿನ ಆರ್ದ್ರತೆಯ ಪ್ರಮಾಣ (%) | 85 | 85 | 85 | 86 | 86 |
| ಮಧ್ಯಾಹ್ನದ ಆರ್ದ್ರತೆಯ ಪ್ರಮಾಣ (%) | 64 | 64 | 64 | 63 | 62 |
| ಗಾಳಿಯ ವೇಗ (ಕಿ.ಮೀ./ಘಂ.) | 7 | 6 | 6 | 4 | 4 |
| ಗಾಳಿಯ ದಿಕ್ಕು (ಡಿಗ್ರಿ) | 111 | 112 | 112 | 112 | 117 |
| ಮೋಡದ ಪ್ರಮಾಣ ( ಆಕ್ಟಾ) | 7 | 7 | 4 | 3 | 3 |

**ಮುನ್ಸೂಚನೆಯ ಸಾರಾಂಶ :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಂದು ಜಿಲ್ಲೆಗೆ ನೀಡಿದ ಮುನ್ಸೂಚನೆಯಂತೆ ಬಾಗಶಃ ಮೋಡ ಇದ್ದು, ಶೀತ ಒಣ ಹವೆ ಮುಂದುವರೆಯುವುದು.ಹಗಲಿನ ಉಷ್ಣಾಂಶ ಸರಾಸರಿ 29.0 ರಿಂದ 30.0$^0$ ಸೆ, ರಾತ್ರಿಯ ಉಷ್ಣಾಂಶ ಸರಾಸರಿ 19.0 ರಿಂದ 21.0$^0$ ಸೆ, ಬೆಳಗಿನ ಆರ್ದ್ರತೆ ಪ್ರತಿಶತ 85 ರಿಂದ 86, ಮಧ್ಯಾಹ್ನದ ಆರ್ದ್ರತೆ ಪ್ರತಿಶತ 62 ರಿಂದ 64 ವರೆಗೆ ಇರುವ ಮುನ್ಸೂಚನೆ ಇದೆ.

### ಹವಾಮಾನ ಆಧಾರಿತ ಕೃಷಿ ಸಲಹೆಗಳು

**ಸಸ್ಯ ಸಂರಕ್ಷಣೆ :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಂದು ಜಿಲ್ಲೆಗೆ ನೀಡಿದ ಮುನ್ಸೂಚನೆಯಂತೆ ಬಾಗಶಃ ಮೋಡ ಇದ್ದು, ಶೀತ ಒಣ ಹವೆ ಮುಂದುವರೆಯುವುದು. ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಕೊಳ್ಳಬೇಕು.

- **ಬೆಳೆ ಕಟಾವು :** ಭಾರತ ಹವಾಮಾನ ವಿಭಾಗವು ಮುಂದಿನ ಐದು ದಿನಗಳಂದು ಜಿಲ್ಲೆಗೆ ನೀಡಿದ ಮುನ್ಸೂಚನೆಯಂತೆ ಬಾಗಶಃ ಮೋಡ ಇದ್ದು, ಶೀತ ಒಣ ಹವೆ ಮುಂದುವರೆಯುವುದು. ಈರುಳ್ಳಿ, ಮೆಣಸಿನಕಾಯಿ ಮತ್ತು ಗೋವಿನ ಜೋಳ ಹಾಗೂ ಇತರ ಬೆಳೆಗಳ ಕಟಾವನ್ನು ಕೈಕೊಳ್ಳಬೇಕು. ನಂತರ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಸಂಗ್ರಹಿಸಿ ಇಡಬೇಕು. ಹತ್ತಿ ಬಿಡಿಸುವ ಕೆಲಸವನ್ನು ಕೈಕೊಳ್ಳಬೇಕು. ಬಿಡಿಸಿದ ಹತ್ತಿಯನ್ನು ಸ್ವಲ್ಪ ಹೊತ್ತು ಬಿಸಿಲಿನಲ್ಲಿ ಒಣಗಿಸಬೇಕು.

**ಮಣ್ಣು ಮತ್ತು ನೀರಿನ ಸಂರಕ್ಷಣೆ :** ಹೊಲದ ಬದುವು ಮತ್ತು ನೀರು ತಡೆ ಒಡ್ಡುಗಳ ರಿಪೇರಿ ಕೆಲಸವನ್ನು ಕೈಕೊಳ್ಳಬೇಕು. ಬೆಳೆಯನ್ನು ಕಳೆಗಳಿಂದ ಮುಕ್ತವಾಗಿಡಬೇಕು. ಸಸಿಗಳು ದಟ್ಟವಾಗಿದ್ದ ಕಡೆ, ಅಶಕ್ತ ಸಸಿಗಳನ್ನು ಕಿತ್ತಬೇಕು. ಕೈಕಳೆ ಹಾಗೂ ಅಂತರ ಬೇಸಾಯ ಮಾಡಿ ಮಣ್ಣಿನಲ್ಲಿಯ ತೇವಾಂಶದ ಸಂರಕ್ಷಣೆ ಮಾಡಬೇಕು. ನೀರಾವರಿ ಸೌಲಭ್ಯವಿದ್ದಲ್ಲಿ ಬೆಳೆಗಳಿಗೆ ನೀರು ಹಾಯಿಸಬೇಕು.

### ಕೃಷಿ ಸಲಹೆಗಳು

**ಕ್ಷೇತ್ರ ಬೆಳೆಗಳು**

| | |
|---|---|
| **ಕಡಲೆ** | ➢ ಕಡಲೆ ಬಿತ್ತುವಾಗ ಬೀಜದಲ್ಲಿ ಪ್ರತಿ ಎಕರೆಗೆ 100 ಗ್ರಾಂ ನಂತೆ ಜೋಳದ ಬೀಜವನ್ನು ಬೆರೆಸಿ ಬಿತ್ತಬೇಕು. ಇದರಿಂದ ಮುಂದಿನ ದಿನಗಳಲ್ಲಿ, ಜೋಳದ ಗಿಡದಲ್ಲಿ ಹಕ್ಕಿಗಳು ಕುಳಿತುಕೊಳ್ಳಲು ಆಸರೆಯಾಗಿ, ಕಾಯಿಕೊರಕ ಕೀಟದ ಕೀಡೆಗಳು ಕಾಣುವಂತಾಗಿ, ಅವುಗಳನ್ನು ತಿನ್ನಲು ಅನುಕೂಲವಾಗಿವುದು.<br>➢ ಕಾಯಿ ಕೊರಕದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ 0.15 ಮಿ.ಲೀ ರೈನಾಕ್ಸೈಫೈರ ಅಥವಾ 2 ಗ್ರಾಂ ಇಮಾಮೆಕ್ಟಿನ್ ಬೆಂಝೋಯೇಟ ಬೆರೆಸಿ ಸಿಂಪಡಿಸಬೇಕು.<br>➢ 35 ರಿಂದ 40 ದಿವಸದ ಬೆಳೆಯಲ್ಲಿ, ಕುಡಿ ಚಿವುಟಬೇಕು ಹಾಗೂ 20 ಪಿಪಿಎಮ್ ಎನ್‌ಎಎ ಸಿಂಪಡಿಸಬೇಕು. ಇದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. |

| | |
|---|---|
| ಸೂರ್ಯಕಾಂತಿ | ➢ ರಸ ಹೀರುವ ಕೀಟದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 1.5 ಮಿ.ಲೀ. ಆಕ್ಸಿಡೆಮಿಟಾನ್ ಮಥೈಲ್ ಅಥವಾ 0.25 ಮಿ.ಲೀ. ಈಮಿಡಾಕ್ಲೋಪ್ರಿಡ್ ಬೆರೆಸಿ ಸಿಂಪಡಿಸಬೇಕು.<br>➢ ಎಲೆ ತಿನ್ನುವ ಕೀಟದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 2 ಮಿ.ಲೀ. ಕ್ವಿನಾಲ್ ಫಾಸ್ ಅಥವಾ 0.3 ಮಿ.ಲೀ. ಇಂಡಾಕ್ಸಾಕಾರ್ಬ ಅಥವಾ 0.1 ಮಿ.ಲೀ. ಸ್ಪೈನೋಸ್ಯಾಡ್ ಬೆರೆಸಿ ಸಿಂಪಡಿಸಬೇಕು.<br>➢ ಬೂದಿ ರೋಗದ ನಿಯಂತ್ರಣಕ್ಕಾಗಿ, 1 ಮಿ.ಲೀ. ಡೈಫೆನ್‌ಕೊನಜೋಲ ಶಿಲೀಂದ್ರನಾಶಕವನ್ನು ಪ್ರತಿ ಲೀಟರ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಈ ಸಿಂಪರಣೆಯನ್ನು 15 ದಿನಗಳ ನಂತರ ಮತ್ತೊಮ್ಮೆ ಮಾಡಬೇಕು.<br>➢ ನಂಜಾಣು ರೋಗದ ನಿಯಂತ್ರಣಕ್ಕಾಗಿ ರೋಗ ಬಾದಿತ ಗಿಡಗಳನ್ನು ಕಿತ್ತು ಹಾಕಿ ಪ್ರತಿ ಲೀಟರ ನೀರಿನಲ್ಲಿ ಇಮಿಡಾಕ್ಲೊಪ್ರಿಡ್ 17.8 ಎಸ್. ಎಲ್. @0.25 ಮಿ.ಲಿ. ಬೆರೆಸಿ ಸಿಂಪಡಿಸಬೇಕು. |
| ತೊಗರಿ | ➢ ಬೆಳೆಯು ಕಾಯಿ ಕಟ್ಟುವ ಹಾಗೂ ಕಾಯಿ ಬಲಿಯುವ ಹಂತದಲ್ಲಿರುವ ತೊಗರಿಯಲ್ಲಿ ಕಾಯಿಕೊರಕದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ 0.15 ಮಿ.ಲೀ. ಕ್ಲೋರೆಂಟ್ರನಿಲಿಪ್ರೋಲ್ ಅಥವಾ 0.2 ಗ್ರಾಂ ಫ್ಲೂಬೆಂಡಿಯಾಮೈಡ 20 ಡಬ್ಲೂಜಿ ಅಥವಾ 0.2 ಗ್ರಾಂ ಇಮಾಮೆಕ್ಟಿನ್ ಬೆಂಝೋಯೇಟ ಅಥವಾ 0.3 ಮಿ.ಲೀ. ಇಂಡಾಕ್ಸಿಕಾರ್ಭ ಅಥವಾ 0.1 ಮಿ.ಲೀ. ಸ್ಪೈನೀಸಾಡ ಬೆರೆಸಿ ಸಿಂಪಡಿಸಬೇಕು. |
| ಕುಸುಬೆ | ➢ ಹೇನು ಕೀಟದ ನಿಯಂತ್ರಣಕ್ಕಾಗಿ ಪ್ರತಿ ಲೀಟರ ನೀರಿನಲ್ಲಿ ಶೇ. 5 ರ ಬೇವಿನ ಬೀಜದ ಕಷಾಯ ಅಥವಾ 1.7 ಮಿ.ಲೀ. ಥೈಮಿಥೋಯೇಟ ಅಥವಾ 0.2 ಗ್ರಾಂ ಥೈಯಾಮಿಥಾಕ್ಸಾಮ್ ಅಥವಾ 1 ಗ್ರಾಂ ಅಸಿಫೇಟ ಬೆರೆಸಿ ಸಿಂಪಡಿಸಬೇಕು. |

## ತೋಟಗಾರಿಕೆ ಬೆಳೆಗಳು

| | |
|---|---|
| ಮಾವು | ➢ ಹೂವು ಬಿಡುವುದಕ್ಕೆ ಮೊದಲು ಹಾಗೂ ಕಾಯಿ ಕಟ್ಟಿದ ಕೂದಲೇ ಜಿಗುಹುಳು ಮತ್ತು ಬೂದುರೋಗದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ 4 ಗ್ರಾಂ ಕಾರ್ಬರಿಲ್ ಅಥವಾ 2 ಮಿ.ಲೀ. ಮೆಲಾಥಿಯಾನ್ ಹಾಗೂ 3 ಗ್ರಾಂ ನೀರಿನಲ್ಲಿ ಕರಗುವ ಗಂಧಕ ಅಥವಾ 2 ಗ್ರಾಂ ಕಾರ್ಬನಡೈಜಿಮ್ ಬೆರೆಸಿ ಸಿಂಪಡಿಸಬೇಕು. ಅವಶ್ಯವಿದ್ದಲ್ಲಿ ಇದೇ ಸಿಂಪರಣೆಯನ್ನು 15 ದಿನಕ್ಕೊಮ್ಮೆ ಪುನರಾವರ್ತಿಸಿ. |
| ಹಸಿ ಮೆಣಸಿನಕಾಯಿ | ➢ ಹಣ್ಣು ಕೊಳೆ ರೋಗದ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ, 1 ಗ್ರಾಂ ಕಾರ್ಬನ್ ಡೈಜಿಮ್ ಬೆರೆಸಿ ಸಿಂಪಡಿಸಬೇಕು.<br>➢ ಕಾಯಿ ಕೊರೆಯುವ ಹುಳುವಿನ ನಿಯಂತ್ರಣಕ್ಕಾಗಿ, ಪ್ರತಿ ಲೀಟರ ನೀರಿನಲ್ಲಿ, 4 ಗ್ರಾಂ ಕಾರ್ಬರಿಲ ಅಥವಾ 2 ಮಿ.ಲೀ. ಕ್ಲೋರಪೈರಿಫಾಸ್ ಬೆರೆಸಿ ಸಿಂಪಡಿಸಬೇಕು. |

**ಪಶು ಸಂಗೋಪನೆ :**

- ಎಲ್ಲ ಜಾನುವಾರುಗಳಿಗೆ ಜಂತು ನಾಶಕ ಔಷಧಿ ಹಾಗೂ ಕಾಲು ಮತ್ತು ಬಾಯಿ ಬೇನೆ , ಚಪ್ಪೆ ಬೇನೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಸೂಕ್ತ ಚುಚ್ಚುಮದ್ದನ್ನು ಹಾಕಿಸಬೇಕು. ಆಡು ಮತ್ತು ಕುರಿಗಳಿಗೆ ಎಂಟರೊಟಾಕ್ಸೀಮಿಯಾ ರೋಗ ನಿರೋಧಕ ಹಾಕಿಸಬೇಕು.
- ಎರೆಹುಳು ಕುಣಿಗಳಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ತೇವಾಂಶ ಸಂಗ್ರಹವಾಗದಂತೆ ನೋಡಿಕೊಳ್ಳಬೇಕು.
- ಹಾಲು ಕೊಡುವ ರಾಸುಗಳಿಗೆ ನಿಯಮಿತವಾಗಿ 1 ಕಿ.ಗ್ರಾಂ ಪಶು ಆಹಾರ + ಪ್ರತಿ ಲೀಟರ ಹಾಲಿನ ಇಳುವರಿಗೆ 50 ಗ್ರಾಂ ನಂತೆ ಲವಣಗಳ ಮಿಶ್ರಣವನ್ನು ತಪ್ಪದೇ ಕೊಡಬೇಕು ಹಾಗೂ ಎಲ್ಲ ದನ ಕರುಗಳಿಗೆ ಹಸಿರು ಮೇವು ಹಾಗೂ ಒಣ ಮೇವುಗಳನ್ನು ಕೊಡಬೇಕು.

ಮಾಹಿತಿಯನ್ನು ಬಿತ್ತರಿಸಲು/ಪ್ರಕಟಿಸಲು/ಪ್ರಚಾರಪಡಿಸಲು ಕೋರಿ ಸಲ್ಲಿಸಲಾಗಿದೆ (1) ವರದಿಗಾರರು, ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯ ಕರ್ನಾಟಕ ಹಾಗೂ ಪ್ರಜಾ ವಾಣಿ ಕನ್ನಡ ದಿನಪತ್ರಿಕೆ, ಗದಗ. (2) ಕೃಷಿ ವಿಜ್ಞಾನ ಕೇಂದ್ರ, ಗದಗ (3) ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ (4) E-TV ಕನ್ನಡ, ಅನ್ನದಾತಾ, ಹೈದರಾಬಾದ (5) ಭಾರತ ಹವಾಮಾನಶಾಸ್ತ್ರ ಇಲಾಖೆ ಬೆಂಗಳೂರು/ಪೂನಾ

ಸಂಪರ್ಕ ಅಧಿಕಾರಿ
ಕೃಷಿ ಹವಾಮಾನಶಾಸ್ತ್ರ ವಿಭಾಗ,
ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರ, ವಿಜಯಪುರ